

# ಹೊಸ ಜಗತ್ತಿಗೆ ಬೆಳಕಿಂಡಿ

ಈಗೀಗ ಜನರ ನಡುವೆ ಆಪ್ತ ಸಂವಾದವೇ ಕಡಿಮೆಯಾಗುತ್ತಿದೆ. ಊರಿನ ಪುಟ್ಟ ಚಾದಂಗಡಿ, ಸಂತೆ, ಅರಳಿಕಟ್ಟೆ, ದೇವಸ್ಥಾನ, ಯಾರದೋ ಮನೆಯ ಜಗಲಿಗಳು ಕಾಡು ಹರಟೆಗಳಿಗೆ ಜಾಗ ಕೊಡುತ್ತಿದ್ದವು. ಅಲ್ಲಿ ಊರಿನ ಹಲವು ತರಲೆ ತಾಪತ್ರಯಗಳು ಪ್ರಸ್ತಾಪವಾಗುವುದರ ಜೊತೆಗೆ, ದೇಶ–ಕೋಶಗಳ ಕುರಿತ ಚಿಂತನೆಯೂ ನಡೆದಿರುತ್ತಿತ್ತು. ಹಾಗೆಯೇ ಅದು ಹಲವರ ಭಾವಲೋಕ, ವ್ಯವಹಾರಜ್ಞಾನ, ಲೋಕಜ್ಞಾನ ವಿಸ್ತರಣೆಗೊಳ್ಳುವ ಸಂಚಾರಿ ಶಾಲೆ ಕೂಡ. ಈಗ ಅದನ್ನು ಒಂದೇ ಏಟಿಗೆ ಟೀವಿ ಎಂಬ ಮೋಹಿನಿ ನಾಶ ಮಾಡಿದ್ದಾಳೆ. ಟೀವಿ ಮುಂದೆ ಕೂತವರು ಹಾವಾಡಿಗನ ಪುಂಗಿಗೆ ತಲೆ ಆಡಿಸುವ ಮಂತ್ರಮುಗ್ಧ ಹಾವಿನಂತಾಗಿದ್ದಾರೆ.

ಒಂದು ಹರಟೆ, ಲೋಕಾಭಿರಾಮದ ಪಟ್ಟಾಂಗ ನಮ್ಮ ಬಹಳಷ್ಟು ಒತ್ತಡಗಳನ್ನು, ಆತಂಕಗಳನ್ನು, ತಪ್ಪು ತಿಳಿವಳಿಕೆಯನ್ನು ಇಲ್ಲವಾಗಿಸುತ್ತದೆ. ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡೇ, ಪರಸ್ಪರರ ಅಭಿಪ್ರಾಯಗಳನ್ನು ಗೌರವಿಸುತ್ತಲೇ ಪ್ರೀತಿಯ, ಅಂತಃಕರಣದ ಸಂಬಂಧವನ್ನು ಇಟ್ಟುಕೊಳ್ಳಬಹುದು. ಅದರಲ್ಲೂ ಪ್ರತಿಭಾವಂತರ ನಡುವಿನ ಸಂವಾದವು ಹೊಸ ಬೆಳಕಿಂಡಿಗಳನ್ನು ತೆರೆಯಬಲ್ಲದು. ಈ ದಿಸೆಯಲ್ಲಿ 'ಮಯೂರ' ವಿಶಿಷ್ಟ ಪ್ರಯತ್ನವನ್ನು ಮಾಡಿದೆ. ಸಾಂಸ್ಕೃತಿಕರಂಗದ ಪ್ರತಿಭಾವಂತರ ನಡುವಿನ ಸಂವಾದದ ಉದ್ದೇಶವಿರುವ 'ಮಾತು–ಕತೆ' ಜನವರಿ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಕತೆಗಾರ್ತಿ ವೀಣಾ ಶಾಂತೇಶ್ವರ ಹಾಗೂ ವಿಮರ್ಶಕಿ ಎಂ.ಎಸ್. ಆಶಾದೇವಿ ಅವರ ನಡುವಿನ ಈ ಸಂವಾದ ಅನೇಕ ವಾಚಕರನ್ನು ಸೆಳೆದಿದೆ, ಅವರ ಮೆಚ್ಚುಗೆಗೆ ಪಾತ್ರವಾಗಿದೆ. ಈ ಸಂಚಿಕೆಯಲ್ಲಿ ಹಿರಿಯ ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್, ಕತೆಗಾರ ಎಸ್. ದಿವಾಕರ್ ಅವರ ನಡುವಿನ 'ಮಾತು–ಕತೆ'ಯನ್ನು ಕೊಡಲಾಗಿದೆ. ಈ ಇಬ್ಬರು ಪ್ರತಿಭಾವಂತರ ಮಾತಿನಲ್ಲಿ ಮಿಂಚಿದ ಹೊಸಹೊಳಹುಗಳು ಓದುಗರಿಗೆ ಪ್ರಿಯವಾಗಬಹುದು ಎಂಬುದು ನಮ್ಮ ಆಶಯ.

ಜನವರಿ ಸಂಚಿಕೆಯನ್ನು ಪ್ರಬಂಧ ವಿಶೇಷವನ್ನಾಗಿ ರೂಪಿಸಲಾಗಿತ್ತು. ಈ ಸಂಚಿಕೆಗೆ ಮೆಚ್ಚುಗೆಯ, ಉತ್ಸಾಹದ ಪ್ರತಿಕ್ರಿಯೆಗಳು ಬಂದಿವೆ. ಈ ಸಂಚಿಕೆಯನ್ನು ಆತ್ಮೀಯವಾಗಿ ಬರಮಾಡಿಕೊಂಡ ಓದುಗರಿಗೆ ಮಮತೆಯ ವಂದನೆ.

**ಸಂದೀಪ ನಾಯಕ**